# ಸಲಿಗೆ ಮತ್ತು ಸ್ಪರ್ಶ

ಕನ್ನಡದಲ್ಲಿ 'ಸಲಿಗೆ ಅತಿಯಾಯಿತು' ಎಂಬ ಮಾತನ್ನು ಮನುಷ್ಯ ಸಂಬಂಧಗಳ ವ್ಯಾಪ್ತಿ ಮತ್ತು ಮಿತಿಯನ್ನು ಕುರಿತು ಮಾತನಾಡುವಾಗ ಬಳಸುತ್ತಾರೆ. ಹತ್ತಿರದವರಲ್ಲಿ ಸಲಿಗೆ ಬೇಕು, ಆದರೆ ಅದು ಮರ್ಯಾದೆಯ ಗೆರೆಯನ್ನು ಮೀರಿ ಹೋಗಬಾರದು ಎಂಬ ಅರ್ಥವನ್ನು ಈ ವಾಕ್ಯ ಸ್ಫುರಿಸುತ್ತದೆ. ಸಲಿಗೆ ಎನ್ನುವುದು ಪರಿಚಿತರೆಲ್ಲರಲ್ಲೂ ಮೂಡುವುದಿಲ್ಲ. ಅಂದ ಹಾಗೆ ಒಡಹುಟ್ಟಿದ ಸೋದರ ಸಂಬಂಧಗಳಲ್ಲೇ ಈ ಸಲಿಗೆಯೆಂಬ ಅಂಶ ಅನೇಕಬಾರಿ ಇರುವುದಿಲ್ಲ. ಅಣ್ಣನಿಗೆ ತಮ್ಮನ ಮೇಲೆ ಅಥವಾ ತಮ್ಮನಿಗೆ ಅಣ್ಣನ ಮೇಲೆ ಪ್ರೀತಿಯಿದ್ದರೂ ಸಲಿಗೆ ಇರುವುದು ಅಪರೂಪ. ಸ್ನೇಹಿತರಂತೆ ಸಲಿಗೆಯಿಂದಿರುವ ಸೋದರರು ಅಪವಾದವೆಂಬಂತೆ ಅಲ್ಲಿ ಇಲ್ಲಿ ತೋರುತ್ತಾರೆ. ಅಣ್ಣನ ಬಗ್ಗೆ ಪಿತೃಸಮಾನ ಗೌರವ ಭಾವವೂ, ತಮ್ಮನ ಬಗ್ಗೆ ಮಗನ ಸಮಾನ ವಾತ್ಸಲ್ಯಭಾವವೂ ಕೆಲಸ ಮಾಡುತ್ತಿರುತ್ತದೆ. ಅಕ್ಕತಂಗಿಯರಲ್ಲೂ ಇದೇ ಭಾವಗಳಿರಬಹುದು ಅಥವಾ ತುಸು ನಿಕಟತೆ ಪ್ರಾಪ್ತವಾಗಬಹುದು ಅಥವಾ ಸ್ತ್ರೀಸಹಜವಾದ ಕೋಮಲ ಭಾವಗಳು ಅಧಿಕವಾಗಿ ಸಂಚರಿಸಬಹುದು. ರಕ್ತ ಸಂಬಂಧದಲ್ಲಿ ಉಂಟಾಗಬಹುದಾದ ಸಲಿಗೆ ಅಪರೂಪವೆಂದೇ ತಿಳಿಯಬೇಕು. ಆ ಕಾರಣಕ್ಕಾಗಿಯೇ ನಿಜವಾದ ಸ್ನೇಹ ಬಂಧವನ್ನು ನಿಸ್ವಾರ್ಥ ನಿಷ್ಕಲ್ಮಶ ಸಂಬಂಧವೆಂದು ಪರಿಭಾವಿಸಿರುವುದು.

ಸಲಿಗೆಯಿದ್ದಲ್ಲಿ ಸ್ಪರ್ಶವಿರಬಹುದು. ಈ ಸ್ಪರ್ಶ ಕೂಡ ಅತ್ಯಂತ ನಿರ್ಮಲ ಭಾವದಿಂದ ಕೂಡಿರಬೇಕೆಂದು ಹೇಳುವವರು ಇದ್ದಾರೆ. ಸಲಿಗೆ ಅತಿಯಾದಾಗ ಸ್ಪರ್ಶ ಕೂಡ ಪದೇ ಪದೇ ಸಂಪರ್ಕ ಪಡೆಯುತ್ತದೆ. ಕೈಮುಟ್ಟುವುದು, ತೋಳು ಸವರುವುದು, ಕೆನ್ನೆ ನೇವರಿಸುವುದರಲ್ಲಿ ಪರಿಸಮಾಪ್ತಿಯಾಗಬೇಕಾದ ಸಂಬಂಧ– ಸಲಿಗೆ ಮಿತಿ ಮೀರಿ ದೇಹದ ಬೇರೆ ಬೇರೆ ಅಂಗಾಂಗಗಳ ಸ್ಪರ್ಶಕ್ಕೆ ಹಾತೊರೆದರೆ, ಅಲ್ಲಿ ನಿರ್ಮಲ ಭಾವದ ಹೊರತಾಗಿ ಮತ್ತಿನ್ನೇನೋ ಬಯಕೆಯು ಕಾಡುತ್ತಿದೆಯೆಂದು ತಿಳಿಯಬೇಕು. ಈ ವಿಚಾರವನ್ನು ಕುರಿತಂತೆ ಕರ್ನಾಟಕದ ಚಿಂತಕರೊಬ್ಬರು ಇತ್ತೀಚೆಗೆ ತಮ್ಮ ಅನುಭವದ ಹಿನ್ನೆಲೆಯಲ್ಲಿ ಈ ರೀತಿ ಮಾತನ್ನಾಡಿದ್ದಾರೆ: 'ನಮ್ಮ ಶೈಕ್ಷಣಿಕ ಮತ್ತು ಔದ್ಯೋಗಿಕ ರಂಗದಲ್ಲಿ ಸಲಿಗೆ ದುರುಪಯೋಗವಾಗುತ್ತಿದೆ. ಸಲಿಗೆ ತನ್ನ ಮಿತಿಯನ್ನು ಮೀರಿ ಸ್ಪರ್ಶದ ನೆಲೆಗೆ ಬಂದಾಗ ವಿರುದ್ಧ ಲಿಂಗಿಗಳಲ್ಲಿ ಯಾರಾದರೊಬ್ಬರು ತಪ್ಪು ತಿಳಿದು ಸಂಯಮ ಮೀರುವ ಸಾಧ್ಯತೆಯಿರುತ್ತದೆ. ಇದರಿಂದಾಗಿಯೇ ಈ ರಂಗಗಳಲ್ಲಿ ಲೈಂಗಿಕ ದುರಾಚಾರಗಳು ಸಂಭವಿಸುತ್ತಿವೆ. ವಿವೇಕ– ವಿವೇಚನೆಗಳು ಹಾದಿತಪ್ಪಿ ಸಲಿಗೆಯ ಸಂಬಂಧವನ್ನು ಹಲ್ಲೆಯ ಹಂತಕ್ಕೆ ತಂದು ನಿಲ್ಲಿಸುವಂಥ ಅವಿವೇಕಗಳುಂಟಾಗುತ್ತಿವೆ.' ಈ ಮಾತುಗಳಲ್ಲಿ ಸತ್ಯವಿರುವುದನ್ನು ಅಲ್ಲಗಳೆಯಲಾಗದು. ಅದರಲ್ಲೂ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಆಧುನಿಕತೆ ತಂದುಕೊಟ್ಟಿರುವ ವಿದ್ಯೆ, ಆರ್ಥಿಕ ಸಬಲತೆಯ ಕಾರಣದಿಂದಾಗಿ ಸ್ತ್ರೀ ಹೊರ ಪ್ರಪಂಚದಲ್ಲಿ ಉದಾರವಾದಿಯಂತೆ ತೋರುತ್ತಾಳೆ. ಈ ಕಾರಣದಿಂದಾಗಿ ದೊರೆತ ಸ್ವಾತಂತ್ರ್ಯದಿಂದಾಗಿ ಪುರುಷ ಸಂಗಡಿಗರ ಜೊತೆ ತುಸು ಸಲಿಗೆಯಿಂದಿರಲು ಯತ್ನಿಸುತ್ತಾಳೆ. ಇದನ್ನು ಅಪಾರ್ಥ ಮಾಡಿಕೊಂಡು ಪುರುಷರು ಅವರನ್ನು ಲೈಂಗಿಕವಾಗಿ ದುರುಪಯೋಗಪಡಿಸಿಕೊಳ್ಳಲು ನೋಡುತ್ತಾರೆ.

ಇದು ಭಾರತೀಯ ಸಾಮಾಜಿಕ ವ್ಯವಸ್ಥೆ! ಶೀಲವನ್ನು ಅತ್ಯಂತ ದೊಡ್ಡ ಮೌಲ್ಯವೆಂದು ನಂಬಿಕೊಂಡು ಬಂದಿರುವ ಸಮಾಜ ನಮ್ಮದು! ಪುರುಷನ ಶೀಲವನ್ನು (ಲೈಂಗಿಕ ನೆಲೆಯಲ್ಲಿ) ಅಷ್ಟು ಜೋಪಾನ ಮಾಡಬೇಕಾದ ಮೌಲ್ಯವೆಂದು ಪರಿಗಣಿಸದ ಸಮಾಜ ಇದು. ಸ್ತ್ರೀಯಂತೆಯೇ ಪುರುಷನಿಗೂ ಶೀಲವಿರುತ್ತದೆ; ಅದಕ್ಕೆ ಅವನು ಬದ್ಧನಾಗಿರಬೇಕು. ಅದರಿಂದ ಅವನ ವ್ಯಕ್ತಿತ್ವ ನಿರ್ಮಾಣವಾಗುತ್ತದೆ ಎಂದು ತಿಳಿಯುವ ಮನಸ್ಥಿತಿ ಅನೇಕರಿಗಿಲ್ಲ. ಸಲಿಗೆಯನ್ನು ಸ್ತ್ರೀ ನೀಡುವ ಆಹ್ವಾನವೆಂದು ಭಾವಿಸಿ ಮುಂದುವರಿಯುವ ಅನೇಕ ಪುರುಷರಿದ್ದಾರೆ. ಆದುದರಿಂದಲೇ ಭಾರತೀಯ ಸಂದರ್ಭದಲ್ಲಿ ಸಲಿಗೆಗೆ ಮಿತಿಯಿರಬೇಕು– ಸಲಿಗೆಯ ದಾರಿಯಲ್ಲಿ ಎಚ್ಚರ– ವಿವೇಕ ಇರಬೇಕು ಎಂದು ಹೇಳುವುದು ಅನಿವಾರ್ಯವಾಗುತ್ತದೆ.

ಸಲಿಗೆಯಿಂದುಂಟಾಗುವ ಸ್ಪರ್ಶ ಸಂಬಂಧ ಅನೇಕ ಸಂದರ್ಭಗಳಲ್ಲಿ ಪ್ರವೃತ್ತಿಯ ಮಟ್ಟದಲ್ಲಿ ವ್ಯವಹರಿಸಿಬಿಡಬಹುದು. ಅದರಲ್ಲೂ ಹರಿ ಹರೆಯದ ಮಕ್ಕಳಲ್ಲಿ ಈ ತಪ್ಪುಗಳು ಹೆಚ್ಚು ಸಂಭವಿಸುವ ಸಾಧ್ಯತೆ ಇರುತ್ತದೆ. ಪ್ರವೃತ್ತಿ ಸಹಜ ಬಯಕೆಯನ್ನು ನಿಯಂತ್ರಿಸುವ ಪ್ರಬುದ್ಧತೆ ಆ ವಯಸ್ಸಿನಲ್ಲಿ ಇನ್ನೂ ಮೂಡಿರುವುದಿಲ್ಲ. ವಯೋಸಹಜ ಕುತೂಹಲ ಆ ನಿಟ್ಟಿನಲ್ಲಿ ಮುಂದುವರಿಯುವಂತೆ ಪ್ರೇರೇಪಿಸುತ್ತದೆ. ಪ್ರಬುದ್ಧರಾಗಿ ಮೈಮನಗಳ ಕೂಡುವಿಕೆಯಲ್ಲಿ ರಸಾನುಭವ ಪಡೆಯಬೇಕಾದ ಮಕ್ಕಳು ಹಸಿ ಬಿಸಿಯಾಗಿ ಭ್ರಮಾಸುಖದ ಪಾತಳಿಯಲ್ಲಿ ಸಿಲುಕಿ ನಲುಗಿ ಹೋಗುತ್ತಾರೆ. ಆದುದರಿಂದಲೇ ಭಾರತೀಯ ಅವಿಭಕ್ತ ಕುಟುಂಬ ವ್ಯವಸ್ಥೆ ಮಕ್ಕಳನ್ನು ನೈತಿಕ ನೆಲೆಗಟ್ಟಿನ ಮೇಲೆ ಬೆಳೆಸಲು ಪರಿತಪಿಸುತ್ತಿತ್ತು. ರಕ್ತಸಂಬಂಧ ಮತ್ತು ಸಮುದಾಯ ಸಂಬಂಧಗಳಿಗೆ ಪಾವಿತ್ರ್ಯತೆಯ ಬಣ್ಣ ಮೂಡಿಸಲು ಯತ್ನಿಸುತ್ತಿತ್ತು.

ಇಂದು ಸ್ಪರ್ಶ ಮಾತ್ರದಿಂದಲೇ ಸಕಲ ವ್ಯಾಧಿಗಳನ್ನು ಗುಣಪಡಿಸುತ್ತೇವೆಂಬ ನುಡಿ ಮುತ್ತು ಉದರಿಸುವ ನವ ಗುರುಗಳು ಹುಟ್ಟಿಕೊಂಡಿದ್ದಾರೆ. ಅದನ್ನು ನಂಬಿ ಅಪಾರ ಹಣ ವ್ಯಯಿಸುವ ಮನೋರೋಗಿಗಳಿದ್ದಾರೆ. ಆದರೆ ಇದರ ಯಾವುದರ ಪರಿವೆಯೂ ಇಲ್ಲದೆ ಅತ್ಯಂತ ಚಾರಿತ್ರ್ಯ ಜೀವನ ನಡೆಸುತ್ತಿರುವ ಕೋಟ್ಯಾಂತರ ಭಾರತೀಯರು ಸಂಸ್ಕೃತಿಯ ಆತ್ಮದಂತಿದ್ದಾರೆ.

■ ಶಿಕಾಕು

## ಮಾತೇ ಮುತ್ತು

★ ಪಾಂಡಿತ್ಯ ಇಲ್ಲದ ಸ್ವಾತಂತ್ರ್ಯಕ್ಕೆ ಅಪಾಯ ಸದಾ ಇರುತ್ತದೆ; ಸ್ವಾತಂತ್ರ್ಯ ಇಲ್ಲದ ಪಾಂಡಿತ್ಯಕ್ಕೆ ಬೆಲೆ ಇಲ್ಲ.

–ಜಾನ್ ಎಫ್. ಕೆನಡಿ

★ ತನ್ನ ಅಪರಾಧ ಮುಚ್ಚಿಕೊಳ್ಳಲು ಮತ್ತೊಬ್ಬರ ತಪ್ಪುಗಳನ್ನು ಸದಾ ಎತ್ತಿ ಆಡುವವನು ಮಹಾಸ್ವಾರ್ಥಿ.

–ಅನುಭವಾಮೃತ

★ ಹಿಂದುಳಿಯುವುದೇನೂ ತಪ್ಪಲ್ಲ. ಮಂದಗತಿಯಲ್ಲಿ ಸಾಗುತ್ತಾ ಸತ್ಯ, ಧರ್ಮ, ನ್ಯಾಯದ ಹಿಂಬಾಲಕರಾದ ಸಜ್ಜನರು ಕೊನೆಗೊಮ್ಮೆ ವಿಜಯದ ಮುಗುಳ್ನಗೆ ಬೀರುತ್ತಾರೆ.

–ವೀರೇಂದ್ರ ಹೆಗ್ಗಡೆ

★ ಯುದ್ಧದ ಫಲ ಮೂರು ಸೈನ್ಯಗಳು: ಅಂಗಹೀನರ ಸೈನ್ಯ, ದುಃಖಿಗಳ ಸೈನ್ಯ ಹಾಗೂ ಕಳ್ಳರ ಸೈನ್ಯ.

–ಜರ್ಮನ್ ಗಾದೆ

★ ಚೆನ್ನಾಗಿ ಬರೆಯುವವನು ಒಳ್ಳೆಯ ಲೇಖಕನಲ್ಲ! ಚೆನ್ನಾಗಿ ಅಳಿಸಬಲ್ಲವನು ಒಳ್ಳೆಯ ಲೇಖಕ!

–ರಷ್ಯಾ ಗಾದೆ

★ ಆತ್ಮಶಿಲ್ಪದ ಕೊನೆಯ ಅಂಗವೆಂದರೆ ಶ್ರದ್ಧೆ. ತನ್ನಲ್ಲಿಯೇ ಶ್ರದ್ಧೆ; ಪರರಲ್ಲಿ ಶ್ರದ್ಧೆ; ತನ್ನನ್ನೂ ಪರರನ್ನೂ ಮೀರಿರುವ ಅನಂತ ಶಕ್ತಿಗಳ ಕಲ್ಯಾಣ ಪಥದಲ್ಲಿ ಶ್ರದ್ಧೆ. ಈ ಶ್ರದ್ಧೆಯಿಂದ ವ್ಯಕ್ತಿ ವಾಮನನಾದರೂ ತ್ರಿವಿಕ್ರಮನಾಗಬಲ್ಲ.

–ವಿ.ಕೃ.ಗೋಕಾಕ

★ ರತ್ನವನ್ನು ಇತರರು ಹುಡುಕಿಕೊಂಡು ಬರುವರೇ ಹೊರತು, ರತ್ನವೇ ಇತರರನ್ನು ಹುಡುಕಿಕೊಂಡು ಹೋಗುವುದಿಲ್ಲ.

–ಕಾಳಿದಾಸ

★ ಕೆಲವು ರೋಗಗಳಿಗೆ ನಾವು ಆತಿಥ್ಯ ಕೊಡುತ್ತೇವೆ. ಇನ್ನು ಕೆಲವು ಅಭ್ಯಾಗತರಂತೆ ಬಂದು ನೆಲೆಸಿಬಿಡುತ್ತವೆ.

–ಎಂ.ವಿ.ಸೀತಾರಾಮಯ್ಯ

★ 'ವಿರೋಧ ಪಕ್ಷದಲ್ಲಿದ್ದಾಗ ಹೇಳಿದುದನ್ನು ಅಧಿಕಾರದಲ್ಲಿರುವಾಗ ಹೇಳಬೇಡಿ' ಎನ್ನುವುದೇ ಪ್ರಪಂಚದ ಎಲ್ಲ ರಾಜಕಾರಣಿಗಳ ನಿಯಮ. ಹಾಗೆ ಹೇಳಿದಲ್ಲಿ ಅಸಾಧ್ಯವಾದುದನ್ನು ಮಾಡಬೇಕಾಗುತ್ತದೆ.

–ಜಾನ್ ಗಾಲ್ಸ್‌ವರ್ದಿ

★ ರಾಜಕೀಯ ಯುದ್ಧದಷ್ಟೇ ಕುತೂಹಲಕಾರಿ– ಅಲ್ಲದೇ ಅಷ್ಟೇ ಅಪಾಯಕಾರಿ ಕೂಡ. ಯುದ್ಧದಲ್ಲಿ ಒಂದು ಸಾರಿ ಸಾಯಬಹುದಾದರೆ ರಾಜಕೀಯದಲ್ಲಿ ಅನೇಕ ಬಾರಿ ಸಾಯಬಹುದು.

–ವಿನ್‌ಸ್ಟನ್ ಚರ್ಚಿಲ್

★ ಮಿತಿಮೀರಿದ ಶೇಖರಣೆಯಿಂದ ಶ್ರೀಮಂತರಾಗುವುದು ಹೇಗೆ ಹಿತವಲ್ಲವೋ ಹಾಗೆ ಮಿತಿಮೀರಿದ ಮಿತವ್ಯಯದಿಂದ ಶ್ರೀಮಂತರಾಗುವುದೂ ಒಳ್ಳೆಯದಲ್ಲ.

–ಎಡ್ಮಂಡ್ ಬರ್ಕ್